AT5810

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರಾಗೃಹ ಇಲಾಖೆಯಲ್ಲಿನ ಉತ್ತರ ವಲಯ ಹಾಗು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿನ ಕಾರಾಗೃಹಗಳ ಉಪಮಹಾನಿರೀಕ್ಷಕರ ಕಛೇರಿ ಉಪಯೋಗಕ್ಕಾಗಿ ವಾಹನಗಳನ್ನು ಖರೀದಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:-** ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ: ಎಡಿಎಂ1/ಕಾಅಯೋ/ಸಿಆರ್-43/2011-12 ದಿನಾಂಕ: 21/9/2013 ಮತ್ತು 21/6/2014.

-----

**ಪ್ರಸ್ತಾವನೆ:-**

ಮೇಲೆ ಓದಲಾದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರದಲ್ಲಿ ಕಾರಾಗೃಹ ಇಲಾಖೆಯಲ್ಲಿನ ಆಡಳಿತ ಮತ್ತು ಭದ್ರತೆಯ ಸಮರ್ಪಕ ನಿರ್ವಹಣೆಗೆ ಉತ್ತರ ವಲಯ ಹಾಗು ಬೆಂಗಳೂರು ಕೇಂದ್ರ ಕಾರಾಗೃಹ ಉಪಮಹಾನಿರೀಕ್ಷಕರುಗಳ ಉಪಯೋಗಕ್ಕಾಗಿ ವಾಹನ ಸೌಲಭ್ಯ ಒದಗಿಸುವುದು ಅವಶ್ಯಕವಾಗಿರುವುದರಿಂದ, 2014-15ನೇ ಸಾಲಿನ ಆಯವ್ಯಯದಲ್ಲಿ ಕಲ್ಪಿಸಿರುವ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ 2056 ಸೆರೆಮನೆಗಳು 195 ಸಾರಿಗೆ ವೆಚ್ಚಗಳಡಿಯಲ್ಲಿ ಒದಗಿಸಿರುವ ರೂ.200.00 ಲಕ್ಷಗಳ ಅನುದಾನದಲ್ಲಿ ವಾಹನ ಒಂದಕ್ಕೆ ₹.6,89,209-52ಗಳಂತೆ ಪ್ರಸ್ತಾಪಿಸಿರುವ 2 ಸಂಖ್ಯೆ ಮಾರುತಿ Sx4 VXi ವಾಹನಗಳನ್ನು ಒಟ್ಟು ₹.13,78,419-00 ಗಳಲ್ಲಿ ಮೆ:ಮಾರುತಿ ಸುಜುಕಿ ಇಂಡಿಯಾ ಲಿ., ಇವರಿಂದ DGS & D ದರದಲ್ಲಿ ಖರೀದಿಸಲು ಮಂಜೂರಾತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 203 ಪಿಆರ್‌ಇ 2013**
**ಬೆಂಗಳೂರು, ದಿನಾಂಕ: 2-1-2015.**

ಕಾರಾಗೃಹ ಇಲಾಖೆಯಲ್ಲಿನ ಆಡಳಿತ ಮತ್ತು ಭದ್ರತೆಯ ಸಮರ್ಪಕ ನಿರ್ವಹಣೆಗೆ ಬೆಂಗಳೂರು ಕೇಂದ್ರ ಕಾರಾಗೃಹ ಉಪಮಹಾನಿರೀಕ್ಷಕರ ಕಛೇರಿ ಉಪಯೋಗಕ್ಕಾಗಿ ಒಂದು ಹೊಸ ವಾಹನವನ್ನು ಸಿಆಸು ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 111 ಶಿವಾನಿ 2011, ದಿನಾಂಕ: 9/5/2013 ರನ್ವಯ ರೂ. 6.50 ಲಕ್ಷಗಳ ಮಿತಿಯೊಳಗೆ (ತೆರಿಗೆ ಹೊರತುಪಡಿಸಿ) ಕೆಟಿಪಿಪಿ ಕಾಯ್ದೆಯ ನಿಯಮಾನುಸಾರ ಮೆ:ಮಾರುತಿ ಸುಜುಕಿ ಇಂಡಿಯಾ ಲಿ., ಇವರಿಂದ DGS & D ದರದಲ್ಲಿ ಖರೀದಿಸಲು ಸರ್ಕಾರವು ಅನುಮತಿ ನೀಡಿದೆ.

..2..

ಮಾರುತಿ Sx4 VXi ಹೊಸ ವಾಹನವನ್ನು ಖರೀದಿಸಿದ ವೆಚ್ಚವನ್ನು 2014-15ನೇ ಸಾಲಿನ ಲೆಕ್ಕ ಶೀರ್ಷಿಕೆ "2056-00-101-0-01 ಸೆರೆಮನೆಗಳು 195 ಸಾರಿಗೆ ವೆಚ್ಚ" ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 601 ವೆಚ್ಚ 11/2014 ದಿನಾಂಕ: 18.12.2014ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು
ಸಿನಿಮಾ)

**ಗೆ:**

1) ಮಹಾಲೇಖಪಾಲರು (ಜಿ&ಎಸ್ಎಸ್ಎ, ಇ & ಆರ್ಎಸ್ಎ, ಎ&ಇ), ಕರ್ನಾಟಕ ಬೆಂಗಳೂರು.
2) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರು, ಶೇಷಾದ್ರಿ ರಸ್ತೆ, ಬೆಂಗಳೂರು.
3) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
4) ಉಪ ನಿರ್ದೇಶಕರು, ಖಜಾನಾ ನಿರ್ವಹಣಾ ಗಣಕ ಯಂತ್ರ ಕೇಂದ್ರ, ಖನಿಜ ಭವನ, ಬೆಂಗಳೂರು.

<u>ಪ್ರತಿಗಳು:-</u>

1) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಿಸಿಎಎಸ್)ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಬೆಂಗಳೂರು.
2) ಸರ್ಕಾರದ ಉಪ ಕಾರ್ಯದರ್ಶಿ (ಕಾನೂನು ಮತ್ತು ಸುವ್ಯವಸ್ಥೆ) ಇವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನ ಸೌಧ, ಬೆಂಗಳೂರು.
4) ಸರ್ಕಾರದಶ ಅಧೀನ ಕಾರ್ಯದರ್ಶಿ, (ಸಮನ್ವಯ) ಒಳಾಡಳಿತ ಇಲಾಖೆ, ಬೆಂಗಳೂರು.
5) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.